ಉ) ನೀಡಿದ್ದಲ್ಲಿ, ಕಾಟ್ ಸ್ಟಾಟ್ ಅನ್ವಯ ಅರಣ್ಯ ಸಂರಕ್ಷಣಾ ಕಾಯಿದೆ, ವನ್ಯಜೀವಿ ಸಂರಕ್ಷಣಾ ಕಾಯಿದೆ, ಜೀವ ವೈವಿಧ್ಯ ಸಂರಕ್ಷಣಾ ಕಾಯಿದೆ, ಪರಿಸರ ಕಾಯಿದೆ, ಮಾಲಿನ್ಯ ಕಾಯಿದೆಗೆ ವಿರುದ್ಧವಾದಂತಾಗುವುದಿಲ್ಲವೇ:

ಊ) ಈ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಶ್ರೀ ಬಿ.ಆರ್. ಯೋಗೀಂದ್ರನಾಥ್ ಸಿಂಗ್‌ರವರಿಗೆ ದಿನಾಂಕ: 28.4.1965 ರಲ್ಲಿ ಗಣಿಗುತ್ತಿಗೆ ಮಂಜೂರು ಮಾಡಲಾಗಿದೆ.

ಈ) ಹೌದು.

ಉ) ಇಲ್ಲ.

ಊ) ಇತ್ತೀಚೆಗೆ ಈ ಪ್ರದೇಶದಲ್ಲಿ ನಡೆಯುತ್ತಿದ್ದ ಗಣಿ ಗಾರಿಕೆಗೆ ವಿರೋಧ ವ್ಯಕ್ತವಾಗಿದ್ದು, ಜಿಲ್ಲಾಧಿಕಾರಿಯವರ ಅಭಿಪ್ರಾಯ ಹಾಗೂ ಅರಣ್ಯ ಇಲಾಖೆಯ ಅಭಿಪ್ರಾಯದ ಮೇರೆಗೆ ಗಣಿ ಗುತ್ತಿಗೆಯನ್ನು ನವೀಕರಿಸದಿರಲು ಕ್ರಮ ತೆಗೆದುಕೊಂಡು ನಿಯಮದಂತೆ ನೋಟೀಸ್ ಜಾರಿ ಮಾಡಲಾಗಿದೆ.

ಶೃಂಗೇರಿ ಕ್ಷೇತ್ರ ವ್ಯಾಪ್ತಿಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

22 (24) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ, ಎನ್.ಆರ್. ಪುರ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ಕಳೆದ ಸಾಲಿನಲ್ಲಿ ಖಾಲಿ ಇದ್ದ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಸದರಿ ತಾಲ್ಲೂಕುಗಳಿಂದ ಹೊರಗೆ ವರ್ಗಾವಣೆಗೊಂಡ ಶಿಕ್ಷಕರೆಷ್ಟು, ಹಾಗೂ ಈ ಮೂರು ತಾಲ್ಲೂಕುಗಳಿಗೆ ಈ ಸಾಲಿನಲ್ಲಿ ಬಂದ ಶಿಕ್ಷಕರ ಸಂಖ್ಯೆ ಎಷ್ಟು;

ಇ) ಗ್ರಾಮೀಣ ಪ್ರದೇಶದಿಂದ ಕೂಡಿದ ಈ ತಾಲ್ಲೂಕುಗಳಲ್ಲಿ ಶಿಕ್ಷಕರ ಹುದ್ದೆಗಳನ್ನು ತುಂಬದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲವೇ;

ಈ) ಹಾಗಿದ್ದಲ್ಲಿ, ಕಾಲಮಿತಿಯೊಳಗೆ ಈ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಒಟ್ಟು: 1219, ಪ್ರೌಢಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಒಟ್ಟು: 249.

ಕಳೆದ ಸಾಲಿನಲ್ಲಿ ಪ್ರಾಥಮಿಕ ಶಾಲೆಯಲ್ಲಿನ ಖಾಲಿ ಹುದ್ದೆಗಳ ಸಂಖ್ಯೆ: 240. ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಹುದ್ದೆಗಳ ಸಂಖ್ಯೆ: 30.

ಆ) ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಿಂದ ಹೊರಗೆ ವರ್ಗಾವಣೆಗೊಂಡ ಶಿಕ್ಷಕರ ಸಂಖ್ಯೆ ಮೂರು ತಾಲ್ಲೂಕಿನಿಂದ ಒಟ್ಟು: 21 ಆಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹೊರಗಿನಿಂದ ವರ್ಗಾವಣೆಯಾಗಿ ಬಂದ ಶಿಕ್ಷಕರ ಸಂಖ್ಯೆ: 07. ಹಾಗೂ 2002–2004ನೇ ಸಾಲಿನ ನೇಮಕಾತಿಯಿಂದ ಮೂರು ತಾಲ್ಲೂಕುಗಳಿಗೆ 101 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಹಾಗೂ ಪ್ರೌಢಶಾಲೆಗಳಲ್ಲಿ 01 ಶಿಕ್ಷಕರು ವರ್ಗವಾಗಿ ಬಂದಿರುತ್ತಾರೆ.

ಇ) ಬಂದಿದೆ.

ಈ) ಕ್ರಮ ಕೈಗೊಳ್ಳಲಾಗುವುದು.

ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ಸಿಬ್ಬಂದಿ ನೇಮಕ

23 (30) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಿಗೆ ಮಂಜೂರಾದ ಸಿಬ್ಬಂದಿ ಹಾಗೂ ಹಾಲಿ ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಆಸ್ಪತ್ರೆವಾರು, ಸಿಬ್ಬಂದಿವಾರು, ವಿವರ ಒದಗಿಸುವುದು)

ಆ) ಕಾಲಮಿತಿಯೊಳಗೆ ವೈದ್ಯರ ಮತ್ತು ತಾಂತ್ರಿಕ ವರ್ಗದವರ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ತಾಲ್ಲೂಕು ಆಸ್ಪತ್ರೆಗಳ ಸಿಬ್ಬಂದಿ ವಿವರ ಈ ಕೆಳಕಂಡಂತಿದೆ:

ತಾಲ್ಲೂಕು ಆಸ್ಪತ್ರೆ	ಮಂಜೂರು	ಖಾಲಿ
ಶೃಂಗೇರಿ	67	25
ಕೊಪ್ಪ	174	63
ಎನ್.ಆರ್. ಪುರ	104	30

(ತಾಲ್ಲೂಕುವಾರು ವಿವರ ಲಗತ್ತಿಸಿದೆ)

ಆ) ಗ್ರಾಮೀಣ ಪ್ರದೇಶಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರ: ಪ್ರಾಆಕೇಂದ್ರ: ಪ್ರಾಆಘಟಕಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಜಿಲ್ಲಾ ಆಸ್ಪತ್ರೆ: ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗೆ ತಾತ್ಕಾಲಿಕವಾಗಿ ಖಾಸಗಿ ತಜ್ಞರನ್ನು ಸಂದರ್ಶಕ ತಜ್ಞರಾಗಿ ಮತ್ತು ನಿವೃತ್ತ ತಜ್ಞ ವೈದ್ಯರನ್ನು ಗೌರವ ತಜ್ಞರಾಗಿ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಖಾಲಿ ಇರುವ ತಾಂತ್ರಿಕ ವರ್ಗದ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಸಮಿತಿ ಮುಖಾಂತರ ಭರ್ತಿ ಮಾಡಲಾಗುತ್ತಿದೆ.